**ದಿನಾಂಕಃ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ರಿಂದ 6, 8 ರಿಂದ 10 ರವರ ಪ್ರತಿ ವಾದಿ ಪರ ವಕೀಲರಿಂದಃ**

ನಾನು 7ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಇಂಗ್ಲೀಷ್ ಓದಲು ಬರುತ್ತದೆಯಾ ಎಂದರೆ ಸಾಕ್ಷಿಯು ಕನ್ನಡ ಬರುತ್ತದೆ ಇಂಗ್ಲೀಷ್ ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಎಷ್ಟು ಸ್ವತ್ತುಗಳ ಮೇಲೆ ದಾವೆ ಹಾಕಿರುತ್ತಾರೆಂದರೆ ಸಾಕ್ಷಿಯು ಸುಮಾರು 5 ಐಟಂಗಳು ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ.101/1 ರಲ್ಲಿ 1 ಎಕರೆ 6 ಗುಂಟೆ, ಸರ್ವೆ ನಂ.103/ಸಂಖ್ಯೆ ಗೊತ್ತಿಲ್ಲ 6 ಅಥವಾ 7 ಇರಬಹುದು ಅದರಲ್ಲಿ 8 ಗುಂಟೆ ಮತ್ತು 6 ಗುಂಟೆಗೆ ಹಾಕಿರುತ್ತಾರೆ. ಸರ್ವೆ ನಂ.104 ಬಾರ್ ಸಂಖ್ಯೆ ಗೊತ್ತಿಲ್ಲ ಅದರಲ್ಲಿ 8 ಗುಂಟೆ, 10 ಗುಂಟೆ ಹಾಕಿರುತ್ತಾರೆ.

2. ಸದರಿ ಸ್ವತ್ತುಗಳ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ಹಳ್ಳ, ಉತ್ತರಕ್ಕೆ ಮಾದಮ್ಮರವರ ಜಮೀನು, ದಕ್ಷಿಣಕ್ಕೆ ಸಣ್ಣಪ್ಪರವರ ಜಮೀನು. ಸದರಿ ಚಕ್ಕುಬಂದಿಯು ದಾವಾ ಆಸ್ತಿಯ ಸರ್ವೆ ನಂಬರ್ ಗಳು ಅಕ್ಕಪಕ್ಕದಲ್ಲೇ ಇದ್ದು ಇದರ ಬಗ್ಗೆ ಹೇಳಿರುತ್ತೇನೆ. ವಾದಿಯು ಕನಕಪುರದಲ್ಲಿ ವಾಸಿಸುತ್ತಾರೆ. ಸದರಿ ದಾವಾ ಸ್ವತ್ತುಗಳು ಹೊಸಮರಿಯನದೊಡ್ಡಿಯಲ್ಲಿ ಇರುತ್ತವೆ. ಪ್ರತಿವಾದಿಗಳ ತಂದೆ ಮಾದೇಗೌಡ ಹಾಗೂ ಚಿಕ್ಕೇಗೌಡ ನಮಗೆ ಹಳೆ ಸಂಬಂಧ ಆಗುತ್ತಾರೆ. ಸದರಿಯವರ ಜಮೀನುಗಳಲ್ಲಿ ಮರಳು ಎತ್ತಿರುತ್ತೇನೆಂದು ಅವರು ನನ್ನ ವಿರುದ್ದ ಪೋಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರ ಜಮೀನಲ್ಲ ನಮ್ಮ ಜಮೀನು ಎಂದು ನುಡಿಯುತ್ತಾರೆ. ಆಗಿನಿಂದಲೂ ನನಗೂ ಅವರಿಗೂ ದ್ವೇಷವಿರುತ್ತದೆಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತುಗಳ ಜಮೀನಿನ ಅಕ್ಕಪಕ್ಕದಲ್ಲಿ ನಮ್ಮ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

3. ಸರ್ವೆ ನಂ.103/4 ರ ಜಮೀನು ನಮಗೆ ಸೇರಿರುತ್ತದೆ. ಸರ್ವೆ ನಂ.104/6 ರಲ್ಲಿ 6 ಗುಂಟೆ ಜಮೀನು ನಮ್ಮದೇ ಇದ್ದು ಇದು ದಾವಾ ಸ್ವತ್ತುಗಳ ಪಕ್ಕದಲ್ಲಿರುತ್ತದೆ. ಸರ್ವೆ ನಂ.112/1 ಇದು ಕೂಡ ಪಕ್ಕದ ಜಮೀನಾಗಿರುತ್ತದೆ. ದಾವಾ ಆಸ್ತಿಗಳು ಮೂಲತಃ

ಕಾಡೇಗೌಡರಿಗೆ ಸೇರಿದ್ದ ಆಸ್ತಿ ಎಂದರೆ ಸರಿ. ಕಾಡೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಕಾಡೇಗೌಡರ ಮೊದಲನೇ ಹೆಂಡತಿ ಕುಳ್ಳಮ್ಮ ಎಂದು ಅವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಕುಳ್ಳಮ್ಮರವರಿಗೂ ಬೂರಮ್ಮ ಎಂಬ ಮಗಳು ಇದ್ದರು ಎಂದರೆ ಸಾಕ್ಷಿಯು ಅದು ಸರಿಯಲ್ಲ ಬೂರಮ್ಮ ಚಾಮಮ್ಮ ಎಂಬ ಎರಡನೇ ಹೆಂಡತಿಯ ಮಗಳು ಎಂದು ನುಡಿಯುತ್ತಾರೆ. ಚಾಮಮ್ಮರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಬೂರಮ್ಮ ಈಕೆಗೆ ಮದುವೆಯಾಗಿತ್ತು ಎಂದರೆ ಸರಿ. ಬೂರಮ್ಮಳಿಗೆ ಮಕ್ಕಳು ಇರಲಿಲ್ಲ ಎಂದರೆ ಒಂದು ಹೆಣ್ಣು ಮಗು ಇತ್ತು ಎಂದು ನುಡಿಯುತ್ತಾರೆ. ಬೂರಮ್ಮಳ ಗಂಡನ ಹೆಸರು ಏನು ಎಂದರೆ ಸಾಕ್ಷಿಯು ನಾವುಗಳು ರಾಮಣ್ಣ ಎಂದು ಕರೆಯುತ್ತಿದ್ದೆವು ಆತನ ಹೆಸರು ಶ್ರೀರಾಮು ಎಂದು ನುಡಿಯುತ್ತಾರೆ. ಅವರು ಸತ್ತು 20 ರಿಂದ 30 ವರ್ಷಗಳಾಗಿರುತ್ತದೆ.

4. ಬೂರಮ್ಮ ತನ್ನ ಗಂಡ ತೀರಿಕೊಳ್ಳುವ ಮುಂಚೆಯೇ ತೀರಿಕೊಂಡಿರುತ್ತಾರೆ. ಬೂರಮ್ಮಳ ಮಗಳು ಯಾವಾಗ ಹುಟ್ಟಿದಳು ಎಂದು ನನಗೆ ಗೊತ್ತಿಲ್ಲ. ಆಕೆಯನ್ನು ಯಾವ ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆಂದು ನನಗೆ ಅಷ್ಟಾಗಿ ಗೊತ್ತಿಲ್ಲ. ಕಾಡೇಗೌಡರ ಮಕ್ಕಳಾದ ಮಾದೇಗೌಡ ಮತ್ತು ಚಿಕ್ಕೇಗೌಡ ಇವರು 1984 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಅದಕ್ಕಿಂತ ಪೂರ್ವದಲ್ಲಿಯೇ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ವಿಭಾಗ ಮಾಡಿಕೊಂಡಂತೆ ಚಿಕ್ಕೇಗೌಡರ ಹೆಸರಿನಲ್ಲಿ 1984 ರಲ್ಲಿಯೇ ಖಾತೆ ಬದಲಾವಣೆಯಾಗಿರುತ್ತದೆಂದರೆ ಅವರಿಬ್ಬರು ಅಣ್ಣ ತಮ್ಮಂದಿರು ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಮಾದೇಗೌಡರು ತೀರಿಕೊಂಡ ನಂತರ ಅವರ ಹೆಂಡತಿಯ ಹೆಸರಿಗೆ 2002 ರಲ್ಲಿ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸಾಕ್ಷಿಯು ಮಾಡಿಸಿಕೊಂಡಿರಬಹುದು ಎಂದು ನುಡಿಯುತ್ತಾರೆ. ಚಿಕ್ಕೇಗೌಡರಿಗೆ 5 ಜನ ಮಕ್ಕಳು ಎಂದರೆ ಸರಿ. ಅದರಲ್ಲಿ ಮಾದೇಗೌಡ ಹಾಗೂ ಪಾರ್ವತಮ್ಮರವರು ತೀರಿಕೊಂಡಿರುತ್ತಾರೆಂದರೆ ಸರಿ. ಮಾದೇಗೌಡರಿಗೆ ರತ್ನಮ್ಮ ಎಂಬ ಹೆಂಡತಿ ಇದ್ದಾರೆಂದರೆ ಸರಿ. ಅದೇ ರೀತಿ ಪಾರ್ವತಮ್ಮ ರವರಿಗೂ ಸಹ ಇಬ್ಬರು ಮಕ್ಕಳು ಇದ್ದಾರೆಂದರೆ ಸರಿ. ಮಾದೇಗೌಡರು ಸತ್ತು 10 ರಿಂದ 12 ವರ್ಷಗಳಾಗಿದ್ದು ಪಾರ್ವತಮ್ಮರವರು ಸತ್ತು 3 ರಿಂದ 4 ವರ್ಷಗಳಾಗಿರುತ್ತವೆ.

5. ವಾದಿಯು ಯಾರ ಯಾರ ವಿರುದ್ದ ದಾವೆ ಹಾಕಿರುತ್ತಾರೆಂದು ನನಗೆ ಗೊತ್ತಿರುತ್ತದೆ. ಅವರುಗಳು ತುಳಸಮ್ಮ, ಚಿಕ್ಕೇಗೌಡರ ಮಕ್ಕಳು ಆಗಿರುತ್ತಾರೆ. ಪಾರ್ವತಮ್ಮರವರ ಮಕ್ಕಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದೇ ರೀತಿ ಮಾದೇಗೌಡರ ಹೆಂಡತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಬೂರಮ್ಮರವರಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಚಿಕ್ಕೇಗೌಡ ಹಾಗೂ ಮಾದೇಗೌಡರು ವಿಭಾಗ ಮಾಡಿಕೊಂಡಂತೆ ಅವರ ಹೆಸರಿನಲ್ಲಿ ಖಾತೆ ಇದ್ದು ಈ ಸಂಬಂದ ವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯು ಕಾಡೇಗೌಡರ ವಂಶಕ್ಕೆ ಸೇರಿರುವುದಿಲ್ಲ ಆದ್ದರಿಂದ ಆಕೆಗೆ ಯಾವುದೇ ಹಕ್ಕು ಬಾದ್ಯತೆ ಬರುವುದಿಲ್ಲ ಎಂದರೆ ಸಾಕ್ಷಿಯು ಆಕೆಯು ಹೆಣ್ಣು ಮಗಳಾಗಿದ್ದು ಭಾಗ ಬರುತ್ತದೆಂದು ನುಡಿಯುತ್ತಾರೆ. ವಾದಿಯು ಯಾವ ದಿನಾಂಕದಂದು ಜನಿಸಿರುತ್ತಾರೆಯಿ ನನಗೆ ಗೊತ್ತಿಲ್ಲ ಆದರೆ 20 ರಿಂದ 30 ವರ್ಷಗಳ ಹಿಂದೆ ಜನಿಸಿರುತ್ತಾರೆಂದು ಗೊತ್ತಿರುತ್ತದೆಂದು ಸಾಕ್ಷಿ ನುಡಿಯುತ್ತಾರೆ. ವಾದಿಯು ಹುಟ್ಟುವ ಮುಂಚೆಯೇ ಮಾದೇಗೌಡ ಹಾಗೂ ಚಿಕ್ಕೇಗೌಡ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ.

6. 1ನೇ ಪ್ರತಿವಾದಿಯ ಜಮೀನಿನಲ್ಲಿ ನಾನು ಅಕ್ರಮವಾಗಿ ಮರಳು ದಂದೆ ಮಾಡುತ್ತಿದ್ದೆ ಎಂಬುದಾಗಿ ಅವರು ನನ್ನ ವಿರುದ್ದ ಪೋಲೀಸರಿಗೆ ದೂರು ನೀಡಿದ ಸಂಬಂಧ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಹಾಗೂ ವಾದಿಯ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಈ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಕುಟುಂಬಕ್ಕೆ ಹಾಗೂ ಪ್ರತಿವಾದಿಯ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**